ಭೂ ಸುಧಾರಣೆ ಕಾಯಿದೆ ಬಗ್ಗೆ

೩೦೫೪. ಶ್ರೀ ಆರ್. ವೆಂಕಟರಾಮಯ್ಯ (ಮಂಗಳಬಾಗಿಲು).—ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಭೂ ಸುಧಾರಣೆ ಕಾಯಿದೆ ಅನುಷ್ಠಾನಕ್ಕೆ ಬಂದಾಗಿನಿಂದ ಈ ತಾರೀಖಿನವರೆಗೆ ಕೋಲಾರ ಜಿಲ್ಲೆಯಲ್ಲಿ ಎಷ್ಟು ಹೆಚ್ಚುವರಿ ಭೂಮಿ ವಿತರಣೆಗೆ ಲಭ್ಯವಿದೆ ?

ಆ) ಭೂ ಸುಧಾರಣಾ ಕಾಯಿದೆಯನ್ವಯ ಗರಿಷ್ಠಮಿತಿಗಿಂತ ಹೆಚ್ಚು ಜಮೀನನ್ನು ಯಾವುದೇ ಭೂ ಒಡೆಯರು ಹೊಂದಿದ್ದಾರೆಯೇ ? ಅಂತಹ ಯಾವುದೇ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದ ಪಕ್ಷದಲ್ಲಿ ಅಂತಹ ಜಮೀನನ್ನು ಸರ್ಕಾರವು ಭೂ ರಹಿತರಿಗೆ ಹಂಚಲು ಯಾವುದೇ ಕ್ರಮವನ್ನು ತೆಗೆದುಕೊಂಡಿದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ಈವರೆವಿಗೂ ಕೋಲಾರ ಜಿಲ್ಲೆಯಲ್ಲಿ ಯಾವುದೇ ಹೆಚ್ಚುವರಿ ಭೂಮಿ ಹಂಚಲು ಲಭ್ಯವಿರುವುದಿಲ್ಲ.

ಆ) ಅಂತಹ ಯಾವುದೇ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಜೀವನಭೀಮಾ ನಗರದ ಶಾಪಿಂಗ್ ಕಾಂಪ್ಲೆಕ್ಸ್‌ನಲ್ಲಿ ತರಕಾರಿ ಹಾಗೂ ಹಣ್ಣು ಮಳಿಗೆ ತೆರೆಯುವ ಬಗ್ಗೆ

೩೦೭೨. ಶ್ರೀ ಮುನಿಸ್ವಾಮಯ್ಯ.—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜೀವನ ಭೀಮಾ ನಗರದ ಶಾಪಿಂಗ್ ಕಾಂಪ್ಲೆಕ್ಸ್‌ನಲ್ಲಿ ಕೋಟದ ಬೆಳೆಗಾರರ ಸಹಕಾರ ಸಂಘದ ತರಕಾರಿ ಮತ್ತು ಹಣ್ಣು ಮಳಿಗೆ ಇದೆಯೇ ?

ಆ) ಇಲ್ಲದೇ ಇದ್ದಲ್ಲಿ ಸರ್ಕಾರವು ಜೀವನ ಭೀಮಾ ನಗರದಶಾಪಿಂಗ್ ಕಾಂಪ್ಲೆಕ್ಸ್‌ನಲ್ಲಿ ತರಕಾರಿ ಹಾಗೂ ಹಣ್ಣು ಮಳಿಗೆ ತೆರೆಯಲು ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯಮಂತ್ರಿಗಳು).—

ಅ) ಇಲ್ಲ.

ಆ) ಜೀವನ ಭೀಮಾ ನಗರದ ಶಾಪಿಂಗ್ ಕಾಂಪ್ಲೆಕ್ಸ್‌ನಲ್ಲಿ ಸದ್ಯಕ್ಕೆ ಮಳಿಗೆಗಳ ಅಭಾವವಿರುವುದರಿಂದ ತರಕಾರಿ ಹಾಗೂ ಹಣ್ಣು ಮಳಿಗೆ ತೆರೆಯಲು ಸಾಧ್ಯವಾಗಿರುವುದಿಲ್ಲ.

ರಾಜ್ಯದಲ್ಲಿರುವ ಐ. ಎ. ಎಸ್. ಅಧಿಕಾರಿಗಳ ಬಗ್ಗೆ

೩೦೮೭. ಶ್ರೀ ಆರ್. ರಾಮಯ್ಯ (ಹಿರಿಯೂರು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಒಟ್ಟು ಐ.ಎ ಎಸ್. ಅಧಿಕಾರಿಗಳ ಸಂಖ್ಯೆ ಎಷ್ಟು ಮತ್ತು ಅವರ ಪೈಕಿ ಕೆ. ಎ.ಎಸ್. ನಿಂದ ಬಡ್ತಿ ಪಡೆದ ಅಧಿಕಾರಿಗಳ ಸಂಖ್ಯೆ ಎಷ್ಟು ?

ಆ) ಬಡ್ತಿ ಪಡೆದ ಐ.ಎ.ಎಸ್. ಅಧಿಕಾರಿಗಳ ಪೈಕಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದವರೆಷ್ಟು ?